ವಿಷಯ:—ಬೆಂಗಳೂರು ಶಿವಮೊಗ್ಗ ಮಾರ್ಗವಾಗಿ ಕುಂದಾಪುರಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸು ಗಳನ್ನು ಓಡಿಸುವುದು.

ಪ್ರ. 610(1710) ಶ್ರೀ ಬಿ. ಅಪ್ಪಣ್ಣ ಹೆಗ್ಗಡೆ (ಬೈಂದೂರು).–ಮಾನ್ಯ ಸಾರಿಗೆ ರಾಜ್ಯಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಅ. ಕುಂದಾಪುರ, ಶಿವಮೊಗ್ಗ–ಬೆಂಗಳೂರು ಹೆದ್ದಾರಿಯು ಕುಂದಾಪುರದಿಂದ ಬೆಂಗಳೂರಿಗೆ ಅತೀ ಸಮೀಪದ ಮಾರ್ಗವೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ ಸದರಿ ಮಾರ್ಗವಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಾಹನಗಳನ್ನು ಓಡಿಸುವ ಏರ್ಪಾಡು ಮಾಡಲಾಗುವುದೆ ;

ಇ. ಈ ಮಾರ್ಗ ಲಾಭದಾಯಕ ಎನ್ನುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಈ. ರಾಜ್ಯ ಸಾರಿಗೆ ಸಂಸ್ಥೆಯವರು ಬಸ್ಸು ಓಡಿಸುವ ಏರ್ಪಾಡು ಮಾಡದಿದ್ದರೆ ಖಾಸಗಿಯವರಿಗೆ ಪರವಾನೇ ನೀಡಲಾಗುವುದೆ ;

ಉ. ಹಾಗಿಲ್ಲದಿದ್ದಲ್ಲಿ ಮೇಲಿನ ಎರಡರಲ್ಲೊಂದರ ಬಗ್ಗೆ ಸರಕಾರದವರು ಶೀಘ್ರ ತೀರ್ಮಾನ ಕೈ ಕೊಳ್ಳುವರೆ ?

ಶ್ರೀ ಎಂ. ಪಿ. ಪ್ರಕಾಶ, (ಮಾನ್ಯ ರಾಜ್ಯ ಸಾರಿಗೆ ಮಂತ್ರಿಯವರು):–

ಅ. ಬಂದಿದೆ.

ಆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ಮಾರ್ಗದಲ್ಲಿ ವಾಹನವನ್ನು ಓಡಿಸುವ ಸಲ್ಪು ವಾಗಿ ಪರವಾನಗಿಯನ್ನು ಪಡೆದಿದ್ದು, ಖಾಸಗಿ ವಾಹನ ಮಾಲೀಕರು ಹೈಕೋರ್ಟಿ ನಿಂದ ತಡೆಯಾಜ್ಞೆಯನ್ನು ತಂದಿದ್ದರಿಂದ ಈ ಮಾರ್ಗದಲ್ಲಿ ವಾಹನವನ್ನು ಓಡಿಸಲು ಸಾಧ್ಯ ವಾಗಲಿಲ್ಲ.

ಇ. ಇಲ್ಲ.

ಈ. ಮತ್ತು ಉ.

ಆ ಪ್ರಶ್ನೆಗೆ ಕೊಟ್ಟಿರುವ ಉತ್ತರ ದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶ್ರೀ ಬಿ. ಅಪ್ಪಣ್ಣ ಹೆಗ್ಗಡೆ,—ಸ್ವಾಮಿ, ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಬಂದಿರತಕ್ಕ ತಡೆಯಾಜ್ಞೆಯನ್ನು ನಿವಾರಿಸಲು ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ 2–3 ಸಾರಿ ಈ ಬಗ್ಗೆ ನಾವು ಪ್ರಯತ್ನ ಮಾಡಿದ್ದೇವೆ. ನಮ್ಮ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಹೈಕೋರ್ಟ್‌ನಲ್ಲಿರತಕ್ಕ ತಡೆಯಾಜ್ಞೆಯನ್ನು ತೀವ್ರವಾಗಿ ತೆರವು ಮಾಡಿಸುತ್ತೇವೆಂದು ಸದನದ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ವಿಷಯ:—ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯಕನ ಹಳ್ಳಿ ಬಳಿಯಲ್ಲಿರುವ ಆನಂದಗಿರಿ ದೇವಸ್ಥಾನದ ಬಗ್ಗೆ.

ಪ್ರ. 611 (1633) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ವುತ್ತರಿಸುವರೆ :–

ಅ. ಬೆಂಗಳೂರು ಉತ್ತರ ತಾಲ್ಲೂಕು ಚೋಳನಾಯಕನ ಹಳ್ಳಿಯ ಹತ್ತಿರ ಆನಂದಗಿರಿ ಬೆಟ್ಟ ಪ್ರದೇಶದಲ್ಲಿ ದೇವಸ್ಥಾನವಿರುವುದು ನಿಜವೇ ? ಹಾಗಿದ್ದಲ್ಲಿ, ಆ ಬೆಟ್ಟದ ವಿಸ್ತೀರ್ಣವೆಷ್ಟು ;

ಆ. ಮೇಲ್ಕಂಡ ಬೆಟ್ಟದ ಸುತ್ತ ಒಬ್ಬ ಸಾರ್ವಜನಿಕ ವ್ಯಕ್ತಿ, ಬೇಲಿಯನ್ನು ಹಾಕಿಸಿರುವುದು ನಿಜವೆ ? ಹಾಗಿದ್ದಲ್ಲಿ ಇತಿಹಾಸ ಪ್ರಸಿದ್ಧವಾದ ದೇವಸ್ಥಾನವನ್ನು ಓರ್ವ ವ್ಯಕ್ತಿಯು ಸ್ವಾದೀನಪಡಿಸಿ ಕೊಳ್ಳಲು ಕಾರಣವೇನು ;

ಇ. ಕೆಲವು ದಿನಗಳ ಹಿಂದೆ ಸಂಬಂಧಪಟ್ಟ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಈ ಬೆಟ್ಟ ಪ್ರದೇಶ ವನ್ನು ಯೋಜನೆಯಲ್ಲಿ ಅಭಿವೃದ್ಧಿಪಡಿಸಲು, ಶಿಫಾರಸು ಮಾಡಿರುವುದು ನಿಜವೆ ;

ಈ. ಈ ಬೆಟ್ಟವು ಪುರಾತನವಾಗಿದ್ದು ಮತ್ತು ಬೆಂಗಳೂರಿಗೆ ಬಹಳ ಸಮೀಪವಾಗಿರುವುದರಿಂದ, ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಎಂ. ರಘುಪತಿ (ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):-

ಅ. ಈ ಪ್ರಶ್ನೆಗಳು ಕಂದಾಯ ಇಲಾಖೆಗೆ ಸಂಬಂಧಪಟ್ಟಿದೆ. ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಆ. —"—

ಆ. —"—

ಈ. ಹಣದ ಕೊರತೆಯಿಂದಾಗಿ ಈ ಆನಂದಗಿರಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು 1983-84 ಮತ್ತು 1984-85ರ ಯೋಜನೆಯಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಿಸಿದಲ್ಲಿ ಮುಂಬರುವ ವರ್ಷಗಳಲ್ಲಿ ಅಭಿವೃದ್ಧಿ ಪಡಿಸಲು ಪ್ರಯತ್ನಿಸಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಈ ಪ್ರಶ್ನೆ ಪ್ರವಾಸೋದ್ಯಮಕ್ಕೆ ಬರತಕ್ಕದ್ದು. ಆದರೆ ಇದನ್ನು ರೆವಿನ್ಯೂ ಇಲಾಖೆಯವರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಿದ್ದೀರಿ. ನೀವು ಪ್ರವಾಸೋದ್ಯಮ ಇಲಾಖೆಯವರು ಏನು ಮಾಡುತ್ತಿದ್ದೀರಿ ? I is a good beauty spot around Bangalore.

ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಆನಂದಗಿರಿ ಬೆಟ್ಟದ ಜಾಗವನ್ನು ಬೇರೆ ಯಾರೋ ಖಾಸಗಿ ವ್ಯಕ್ತಿಗಳು ನುಂಗಿಹಾಕಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಅಲ್ಲಿ ಸುತ್ತಲೂ ಬೇಲಿಯನ್ನು ಹಾಕಿಕೊಂಡಿದ್ದಾರೆ. ತಾವು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಂಡು ಅವರು ಹಾಕಿರತಕ್ಕ ಬೇಲಿಯನ್ನು ಕಿತ್ತಿಹಾಕಿಸಿ ನಿಮ್ಮ ಸುಬರ್ದಿಗೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಈಗ ಆ ಪ್ರದೇಶವನ್ನು ಖಾಸಗೀ ವ್ಯಕ್ತಿಗಳು ಕಬಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ನಿಮ್ಮ ವಶಕ್ಕೆ ತೆಗೆದುಕೊಂಡು ಮುಂದಿನ ವರ್ಷಗಳಲ್ಲಾದರು ಪ್ರವಾಸೀ ಕೇಂದ್ರವನ್ನಾಗಿ ಮಾಡಬೇಕೆಂದು ತಾವು ಕೇಳುತ್ತಿದ್ದೀರಿ. ನಾನು ಈ ಬಗ್ಗೆ ತಕ್ಷಣ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಕರೆಯಿಸಿಕೊಂಡು ಈ ಪ್ರದೇಶವನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಡಬೇಕೆಂದು ತಿಳಿಸುವಂತೆ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆದು ಇವತ್ತು ಆದೇಶ ಕೊಡುತ್ತೇನೆ.

ವಿಷಯ :- ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಅಪಘಾತಗಳ ಬಗ್ಗೆ

ಪ್ರ. 613(1414) ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ರಾಜ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :--

ಅ. 1981-82, 1982-83 ಮತ್ತು 1983-84ನೇ ಸಾಲುಗಳಲ್ಲಿ ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಅಪಘಾತದಿಂದ ಸತ್ತವರ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು ಹಾಗೂ ಅವರಿಗೆ ಕೊಟ್ಟಿರುವ ಒಟ್ಟು ಪರಿಹಾರ ಧನವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ರಾಜ್ಯ ಸಾರಿಗೆ ಸಚಿವರು) :—

ಅ. 1981-81, 1982-83 ಮತ್ತು 1983-84ನೇ ಸಾಲುಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಅಪಘಾತದಿಂದ ಸತ್ತವರ ಹಾಗೂ ಗಾಯಗೊಂಡವರ ಸಂಖ್ಯೆ ಮತ್ತು ಅವರಿಗೆ ಕೊಟ್ಟಿರುವ ಪರಿಹಾರ ಧನದ ವಿವರಗಳನ್ನು ಕೆಳಗೆ ಸೂಚಿಸಿದೆ :—